ಪೂರ್ವಾಪರಗಳನ್ನು ಬದಿಗೊತ್ತಿ ಕೂತೆ ಸುಮ್ಮನೆ ಆ ಹುಡುಗನನ್ನು ನೋಡುತ್ತಾ.

ಅಳುವ ಹುಡುಗನ ಕಡೆ ನನ್ನ ಕಣ್ಣುಗಳ ಜೊತೆ ಭಾವವನ್ನೂ ನೆಟ್ಟು ಕೂತೆ. ಜನ ಮೆಲ್ಲ ಮೆಲ್ಲ ಕರಗ ಹತ್ತಿದ್ದರು. ಒಂದಿಡಿ ಸೊಳ್ಳೆಗಳೂ ಹೆಚ್ಚಾದವು. ಹುಡುಗನ ಅಳುವ ಕಣ್ಣುಗಳು ನಿಂತಿರಲಿಲ್ಲ. ರೈಲು ಕೂಡ ಬರುವ ಸುಳಿವು ಇರಲಿಲ್ಲ. ನಿಂತ ಹುಡುಗ ಕದಲ ಹತ್ತಿದ. ಆ ಕಡೆ ಈ ಕಡೆ ಹೋಗುವುದು, ಬರುವುದು, ನಿಲ್ಲುವುದು, ಅಳುವುದು ಅಷ್ಟೇ ಸಾಗಿತ್ತು. ಹತ್ತಿತ್ತರ ಒಂದು ಗಂಟೆಯಷ್ಟು ಸಮಯ ಕಳೆದು ಹೋಗಿತ್ತು. ನನಗೆ ಅದರ ಯಾವುದೇ ತಳ ಬುಡವೂ ಅರ್ಥವಾಗಿರಲಿಲ್ಲ.

ಕೆಲವೊಮ್ಮೆ ಇಂತಹ ವಿಷಯಗಳಲ್ಲಿ ನನ್ನ ಉದ್ದನೆಯ ಮೂಗನ್ನು ತೂರಿಸಿ ಪೇಚಿಗೆ ಸಿಕ್ಕಿಕೊಂಡಿದ್ದು ಇದೆ. ನನಗ್ಯಾಕೆ ಇಲ್ಲದ ಉಸಾಬರಿ ಅಂತ ಆ ಕಡೆಯಿಂದ ನೋಟ ಕಿತ್ತು ಬಿಡೋಣ ಅಂದ್ರೆ ಮನಸ್ಸು ಒಪ್ಪುತ್ತಿಲ್ಲ. ಒಡೆಯ ನಾನಿದ್ದರೂ ಅನಾಥನಂತೆ ಬಿದಿದ್ದ ಬ್ಯಾಗಿಗೊಂದು ಬಡಿದು ಬೆನ್ನಿಗೇರಿಸಿಕೊಂಡು ಹುಡುಗನ ಹತ್ತಿರ ನಡೆದೆ.

ತನ್ನ ಕಡೆ ಬರುತ್ತಿರುವ ಅಸಾಮಿಯನ್ನು ಕಂಡು ಹುಡುಗ ಮತ್ತೊಷ್ಟು ದಿಗಿಲುಕೊಂಡಂತೆ ಕಂಡ. ಹತ್ತಿರ ಸಮೀಪಿಸಿದೆ. ಏನೆಂದು ಕರೆಯುವುದು? ಹೇಗೆ ಮಾತಾಡಿಸೋದು? ಕಂದನದು ಏನೂ ತಿಳಿಯದ ವಯಸ್ಸು. ಯಾವ ಮಾತಿಗೆ ಉತ್ತರಕೊಟ್ಟೀತು, ಕೊಡಲಾರದು ತಿಳಿಯದಾದೆ. ಅಂತೂ ತನ್ನೆಲ್ಲ ಆಲೋಚನೆಗಳನ್ನು ಒಟ್ಟುಗೂಡಿಸಿ ಹತ್ತಿರ ನಿಂತು 'ಪುಟ್ಟ ಯಾರಪ್ಪ ನೀನು? ಯಾಕೆ ಅಳ್ತಿದೀಯಾ?' ಅಂದೆ ಅಷ್ಟೇ. ಹುಡುಗ ಹೆದರಿಕೊಂಡ. ಸಡನ್ ಆಗಿ ಮೇಲೆ ಬಿದ್ದ ಅನುಕಂಪಕ್ಕೆ ಏನೊ ಅಳು ಒಂಚೂರು ಜಾಸ್ತಿಯಾಯ್ತು. ಧೈರ್ಯ ಮಾಡಿ ತಲೆಯ ಮೇಲೆ ಕೈಯಿಟ್ಟು ನೇವರಿಸಿ 'ಹೇಳಪ್ಪ ಕಂದ, ಯಾರು ಬೇಕಿತ್ತು? ಯಾಕೆ ಅಳ್ತಿದೀಯಾ? ಯಾವ ಊರು?' ಅಂತ ಬಲವಂತ ಮಾಡಿದೆ. ಬಿಕ್ಕಳಿಕೆ ಮತ್ತು ಅಳು ಎರಡು ಸೇರಿದ ಧ್ವನಿಯಲ್ಲಿ 'ಅಪ್ಪಾ.. ಅಪ್ಪಾ.. ಅಮ್ಮಾ..' ಅಂದಿತು ಎಳೆ ಧನಿ. ಯಾರೋ ಮಗುವನ್ನು ಕಳೆದುಕೊಂಡು ಹೋಗಿದ್ದಾರೆ, ಇವ್ನೆ ಎಲ್ಲೋ ನೋಡುತ್ತಾ ನಿಂತು ಕಳೆದುಹೋಗಿರಬೇಕು ಅಂದುಕೊಂಡೆ. 'ಎಲ್ಲಿ ಹೋದ್ರು ನಿಮ್ಮಪ್ಪ? ಯಾವ ಊರು?' ಅಂದೆ. ಹುಡುಗ ಮೌನದೊಳಗೆ ಅಳುತ್ತಲೇ ಇದ್ದ. 'ನಿಮ್ಮಪ್ಪ ಎಲ್ಲಿ ಹೋದ್ರು? ನೀನು ಎಲ್ಲಿ ತಪ್ಪಿಸಿಕೊಂಡೆ?' ಅಂತ ಅವನಿಗೆ ಅರ್ಥವಾಗುವ ಶೈಲಿಯಲ್ಲಿ ಹೇಳುವ ಪ್ರಯತ್ನ ಮಾಡಿದೆ. ಹುಡುಗ ಏನೋ ಹೇಳಲಿಕ್ಕೆ ಪ್ರಯತ್ನಿಸುತ್ತಿದ್ದ ಅನಿಸಿತ್ತು. ಆದರೆ ಹೆದುರುತ್ತಿದ್ದಾನೆ ಎಂದು ಗೊತ್ತಾಯ್ತು. ಎಳೆ ಕಂದನೊಬ್ಬ ಯಾರೂ ಗೊತ್ತಿಲ್ಲದ ಮನುಷ್ಯನೊಂದಿಗೆ ಹೇಗೆ ಮಾತನಾಡೀತು ಎಂಬುದು ನನ್ನ ಅರಿವಿಗೆ ಬಾರದೇ ಇರಲಿಲ್ಲ.

ಅವನ ಮುಂದೆ ಮಂಡಿಯೂರಿ ಕೂತು ಸಮಾಧಾನಕ್ಕೆ ಪ್ರಯತ್ನಿಸಿದೆ. ಎದ್ದು ಅವನ ಕೈಹಿಡಿದುಕೊಂಡು ಅಲ್ಲಿ ಪಕ್ಕದಲ್ಲಿದ್ದ ಹೋಟೆಲ್ ಕಡೆ ಕರೆದೊಯ್ದೆ. ಮಗು ಮೊದಲು ಬರಲು ವಿರೋಧಿಸಿದಂತಾದರೂ ಜೊತೆಗೆ ಹೆಜ್ಜೆ ಹಾಕಿದ. ಹುಡುಗನ ಕೈ ಹಿಡಿದು ಹೋಟೆಲ್ ಹೊಕ್ಕೆ. ನಾ ಹೋಗಬೇಕಾದ ಟ್ರೈನ್ ಬಂದು ನಿಂತಿತು. ಮತ್ತೊಂದು ಹೆರಿಗೆಯ ಗುಜು ಗುಜು. ಅಳುವ ಹುಡುಗನ ಕೈಹಿಡಿದಿರುವಾಗ ಕೈ ಬಿಟ್ಟು ರೈಲು ಹತ್ತುವುದೆಂತು! ಮನಸ್ಸು ಬೇಡ ಎಂದಿತು. ಮತ್ತೆ ಮತ್ತೆ ರೈಲುಗಳು ಬರಬಹುದು, ಬಸ್ಸಗಳು ಬರಬಹುದು, ಈ ಮಗುವಿನ ಕೈ ಬಿಟ್ಟರೆ ಅವನು ಅವನ ಮನೆಯನ್ನು ಸೇರದೆ ಹೋಗಬಹುದು. ಹುಡುಗನ ಈಗಿನ ಸ್ಥಿತಿ ಹೋಗದಂತೆ ತಡೆಯಿತು. ರೈಲು ತನ್ನ ಪಾಡಿಗೆ ತಾನು ಹೊರಟು ಹೋಯಿತು.

ಮಗುವನ್ನು ಹೋಟೆಲ್‌ನ ಕುರ್ಚಿ ಮೇಲೆ ಕೂರಿಸಿ ಅವನ ಪಕ್ಕ ಕೂತೆ. ಹಸಿವೆಗೆ ಚಿಹ್ನೆಗಳೇ ಜಾಸ್ತಿ. ಹಸಿವಿಗೆ ವಿವರಣೆ ಬೇಕಿಲ್ಲ. ಮಗು ಹಸಿದಿದೆ ಎಂದು ಸ್ಪಷ್ಟವಾಗಿತ್ತು. ಮಗಿವಿಗೆ ಅಲ್ಲೇ ಕೂತಿರಲು ಹೇಳಿ ಕೌಂಟರ್ಗೆ ಹೋಗಿ ಹುಡುಗನಿಗೆ ಇಡ್ಲಿ, ನಂಗೆ ಕಾಫಿ ತಗೆದುಕೊಂಡು ಬಂದೆ. ಹೋಟೆಲ್‌ಗೆ ಬಂದವರ ಮುಂದೆ ನೀರಿಟ್ಟು 'ಏನ್ ಕೊಡ್ಲಿ ಸ್ವಾಮಿ' ಅನ್ನುವ ಪರಿಪಾಠ ಈಗೀಗ ಮರೆಯಾಗುತ್ತಿದೆ. ಹೊಸ ಕಾಲದ ಗಿಫ್ಟ್.

ತಂದು ಮಗುವಿನ ಮುಂದಿಟ್ಟು 'ತಿನ್ನು ಪುಟ್ಟ' ಅಂದು ನಾನು ಒಂದು ಗುಟುಕು ಕಾಫಿ ಹೀರಿದೆ. ಮಗು ಸುಮ್ಮನೆ ಕೂತಿತ್ತು. ಮಗುವಿನ ಮನಸ್ಸಿನೊಳಗೆ ಅದೇನು ನಡೆದಿರಬಹುದು ಗೊತ್ತಾಗುವುದೇ ಹೇಗೆ? ತಲೆಯ ಮೇಲೆ ಕೈ ಹಾಕಿ ನೇವರಿಸುತ್ತಾ ತಿನ್ನಲು ಬಲವಂತ ಮಾಡಿದೆ. ತಿನ್ನಲು ಆರಂಭಿಸಿದ. ಅವನ ತಿನ್ನುವಿಕೆ ಅವನಿಗಾಗಿದ್ದ ಹಸಿವನ್ನು ತೋರಿಸಿತ್ತು. ನಾನು ಕಾಫಿ ಮುಗಿಸಿ ಮಗುವಿಗೆ ಕುಡಿಯಲು ನೀರು ಕೊಟ್ಟೆ. ಅಪರಿಚಿತ ವ್ಯಕ್ತಿ, ಅಪರಿಚಿತ ಮಕ್ಕಳ ಮಕ್ಕಳ ಬಗೆಗೆ ಸಾಮಾನ್ಯರಿಗೆ ಕಾಡುವ ಭಯವೇಕೊ ಅಂದು ನನಗೆ ಕಾಡಿರಲಿಲ್ಲ. ತದನಂತರದ ಕೇಸ್ ಪೋಲಿಸ್ ರಿಸ್ಕ್‌ಗಳು ಯಾಕೆ ಅನ್ನುವುದು ಕೂಡ ಅರಿವಿಗೆ ಬಂದಿರಲಿಲ್ಲ. ಮಗುವಿನ ಆ ಕ್ಷಣದ ನೋಟ ಎಂತಹವರ ಮನುಷ್ಯತ್ವವನ್ನು ಕಾಡುವಂತಿತ್ತು.

ಹುಡುಗ ಒಂಚೂರು ಗೆಲುವಾದ ಮಗುವಿಗೆ ನನ್ನ ಮೇಲೆ ಒಂದು ತರಹದ ನಂಬಿಕೆ ಮೂಡಿತಾ? ಗೊತ್ತಿಲ್ಲ! ಅವನ ಕಣ್ಣುಗಳಲ್ಲಿ ವಿಶ್ವಾಸ ಗುರುತಿಸಿದೆ. ಅಲ್ಲೇ ಕೂತು ಮಗುವಿನ ಊರು ವಿಳಾಸವನ್ನೆಲ್ಲವನ್ನು ಎಳೆಯುವ ಪ್ರಯತ್ನ ಮಾಡಿದೆ. ಆರಂಭದಲ್ಲಿ ಕೇಳಿದಕ್ಕೆಲ್ಲ ಬರೀ ಮೌನ. ನಾನು ಕೇಳಿದಕ್ಕೆ ಯಾವುದಕ್ಕೂ ಸರಿಯಾಗಿ ಉತ್ತರವಿಯ್ಯದೇ ಹರಕು ಮುರುಕು ಮಾತುಗಳಲ್ಲಿ ಏನೇನೊ ಹೇಳುತ್ತಿದ್ದ. ಸತತ ಅರ್ಧಗಂಟೆಯ ನನ್ನ ಪ್ರಯತ್ನದ ಫಲವಾಗಿ ಆ ಹುಡುಗ ಇಂದು ಈ ಹೊತ್ತಿಲ್ಲ ರೈಲ್ವೆ ಸ್ಟೇಷನ್ ಬರಲು ಕಾರಣ ಗೊತ್ತಾಗಿ ಹೊಯ್ತು. ಅವನ ಹರಕು ಮುರುಕು ಪದಗಳನ್ನು ನನ್ನೊಳಗೆ ಜೋಡಿಸಿಕೊಂಡಿದ್ದು ಹೀಗೆ.

* * *

ಹೌದು, ಎಲ್ಲರಿಗೂ ಇರುವ ಅಪ್ಪ ನನಗೆ ಯಾಕಿಲ್ಲ!? ಮುದ್ದು ಹುಡುಗನ ಮನಸ್ಸಿನಲ್ಲಿ ಮುದ್ದು ಪ್ರಶ್ನೆ ಮೂಡಿತ್ತು. ತರಗತಿಯ ಪಾಠಗಳು, ಜೊತೆಗಿನವರ ಮಾತುಗಳು, ಅಲ್ಲಲ್ಲಿ ನೋಡುತ್ತಿದ್ದ ನೋಟಗಳು 'ಅಪ್ಪ' ಎನ್ನುವ ಒಂದು ಪಾತ್ರ ತನ್ನ ಜೀವನದಲ್ಲಿ ಏಕಿಲ್ಲ ಅನಿಸುವಂತೆ ಮಾಡಿತ್ತು. ಅದೇ ಮುಗ್ಧತೆಯಲ್ಲಿ ಬಂದು ಅಮ್ಮನನ್ನು ಕೇಳಿದ್ದ. 'ಅಮ್ಮಾ, ಅಪ್ಪ ಎಲ್ಲಿ?' ಏನು ಉತ್ತರ ಕೊಟ್ಟಾಳು!. ಉತ್ತರವೇ ಇಲ್ಲ ಅಂತಲ್ಲ. ಇಷ್ಟು ಬೇಗ ತನಗೆ ತಂದೆಯೇ ಇಲ್ಲ ಎಂಬ ಅರಿವು ಮಗನಿಗೆ ಏಕೆ ಎಂದು ಅದನ್ನು ಹಾಗೆ ಹಿಡಿದಿಟ್ಟಿದ್ದಳು.

ತಾನು ಆರು ತಿಂಗಳು ಗರ್ಭಿಣಿಯಾಗಿದ್ದಾಗ ಗಂಡನಿಗೆ ಜ್ವರ ಬಂದಿದ್ದೆ ನೆಪವಾಗಿ ಹತ್ತು ಹದಿನೈದು ದಿನಗಳ ಸರ್ಕಾರಿ ಆಸ್ಪತ್ರೆಯ ವಾಸದಲ್ಲಿ ಒಂದು ದಿನ ಇದ್ದಕ್ಕಿಂದ ಹಾಗೆ ಸತ್ತು ಹೋಗಿದ್ದ. ಹೊಟ್ಟೆಯೊಳಗಿನ ಮಗು ಅನಾಥವಾಗಿತ್ತು. ತವರು ಸೇರಿ ಹಡೆದು, ಮಗುವನ್ನು ಜತನ ಮಾಡಿಕೊಂಡು ಬದುಕಿದ್ದಳು. ಅತ್ತಿಗೆಯ ಮಾತುಗಳಿಂದ ಅಲ್ಲಿಂದ ಹೊರ ಬಂದು ಸ್ವಂತಕ್ಕೆ ಬದುಕಿದ್ದಳು. ಗಂಡನ ಮನೆಯಿಂದಲೂ ಆಸ್ತಿಯ ಕಾರಣಕ್ಕೆ ತಳ್ಳಲ್ಪಟ್ಟಿದ್ದಳು. ಯೌವ್ವನ ಇನ್ನೂ ಹಸುರಾಗಿರುವ ಕಾರಣ ತಿನ್ನುವ ಕಣ್ಣುಗಳಿಂದ ಪಾರಾಗುವುದೇ ಸವಾಲಾಗಿತ್ತು. ಹೇಗೋ ಮಗುವನ್ನು ಚನ್ನಾಗಿ ಸಾಕುವ ಹಠಕ್ಕೆ ಬಿದ್ದು ಬದುಕಿದ್ದಳು. ಮಗು ಆಗ ತಾನೇ ಒಂದನೇ ಕ್ಲಾಸಿಗೆ ಸೇರಿತ್ತು.

ಮಗ ಬಂದು 'ಅಪ್ಪ ಎಲ್ಲಮ್ಮಾ?' ಅಂತ ಕೇಳಿದಾಗ ಉತ್ತರ ಹೇಳಬೇಕಿತ್ತು. ಆದರೆ ನಿನಗೆ ತಂದೆಯಿಲ್ಲ ಸತ್ತು ಹೋಗಿದ್ದಾರೆ, ತಾಯಿಯೊಬ್ಬಳೇ ಎನ್ನುವುದನ್ನು ಹೇಳುವುದು ಆಕೆಗೆ ಇಷ್ಟವಿಲ್ಲ. ತಾನು ತಂದೆಯಿಲ್ಲದ ಮಗು ಎಂಬ ಭಾವನೆ ಇಷ್ಟ ಬೇಗನೇ ಬಂದು ಬಿಡಬಾರದು. ತಂದೆ ಇಲ್ಲದಿರುವಿಕೆ ಎಂದೂ ಬಾಧಿಸಬಾರದೆಂದು ಅಂದುಕೊಂಡಿದ್ದಳು. ತಾನು ತಂದೆಯಿಲ್ಲದ ಮಗ ಎಂಬ ಭಾವನೆಯೇ ಬರದ ಹಾಗೆ ನೋಡಿಕೊಳ್ಳಬೇಕೆಂದಿದ್ದಳು. ಆದರೆ ಆ ಮಗುವನ್ನು ಸಮಾಜ ಕಾಡಿತ್ತು.

'ಮಗು ನಿಮ್ಮಪ್ಪ ಇದಾರೆ ಕಣೋ! ಅಲ್ಲಿ ದೂರದಲ್ಲಿ ಬೆಂಗಳೂರು ಅಂತ ಇದೆಯಲ್ಲಾ, ಅಲ್ಲಿದ್ದಾರೆ. ನಿನಗೆ ನನಗೆ ಏನೇನು ಬೇಕು ಅದ್ನ ತಗೊಳೋಕೆ ದುಡ್ಡು ಬೇಕಲ್ವ ಅದಕ್ಕೆ ಅಲ್ಲಿ ಕೆಲಸಕ್ಕೆ ಇದಾರಪ್ಪ' ಅಂದಳು.

'ಹೌದಾ, ಮತ್ತೆ ಯಾಕೆ ಒಂದ್ಸರಿನೂ ಬಂದಿಲ್ಲ?' ಅನ್ನಬೇಕೆ ಮಗು. 'ಬಂದಿದ್ರು ಕಣೋ ನೀ ಅಜ್ಜಿ ಮನೆಗೆ ಹೋಗಿದ್ಯಲ್ಲ ಆಗ' ಎಂದು ಎಂದು ಅಳುತ್ತಿದ್ದ ಮನಸ್ಸಿನಲ್ಲೇ ಉತ್ತರಿಸಿದ್ದಳು. 'ಹೌದಾ? ಬೆಂಗಳೂರು ಎಲ್ಲಿದೆ? ತುಂಬಾ ದೂರನಾ?' ಅಂದಿತು ಮಗು. 'ಹೂಂ ಕಂದ ತುಂಬಾ ದೂರ..' ಎನ್ನುತ್ತಾ ಮಗುವನ್ನು ಎತ್ತಿಕೊಂಡು ಆಚೆ ಬಂದು ಮನೆಯಿಂದ ದೂರದಲ್ಲಿ ಹೋಗುತ್ತಿದ್ದ ರೈಲನ್ನು ತೋರಿಸಿ 'ನೋಡು ಈ ರೈಲು ಹೋಗುತ್ತಲ್ಲ ಆ ಊರು' ಅಂದಳು. ಮಗುವಿನ ಕಣ್ಣು ಅರಳಿದ್ದು ಅವಳ ಅರಿವಿಗೆ ಬರಲಿಲ್ಲ. ಪ್ರಶ್ನೆಗಳೂ ನಿಂತವು, ಉತ್ತರಗಳೂ ನಿಂತವು. ಮಗುವಿನ ಮನಸ್ಸಿನಲ್ಲಿ ಅಪ್ಪನನ್ನು ಕಾಣುವ ಯೋಚನೆ ಸಿದ್ದವಾಗ ತೊಡಗಿತು. ಬೆಂಗಳೂರಿಗೆ ಹೋದ್ರೆ ಅಪ್ಪ ಸಿಗ್ತಾರೆ. ಯಾಕೆ ಹೋಗಬಾರದು ಎಂಬ ಯೋಚನೆಗೆ ಗರಿ ಮೂಡಿತು. ಅದೇ ಯೋಚನೆಯಲ್ಲಿ ಮಲಗಿ, ಬೆಳಕು ಹರಿಸಿದ.